ಬಿ.ಎಸ್.ಹಾಗೂ ಟಿ.ಸಿ. ಕಾಲೇಜುಗಳಿಗೆ ಅನುದಾನ ನೀಡುವ ಬಗ್ಗೆ

1130 - ಶ್ರೀ ಎ.ಎಂ. ಉದಾಸಿ (ಹಾನಗಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಬಿ.ಎಡ್. ಟಿ.ಸಿ.ಹೆಚ್. ಕಾಲೇಜುಗಳನ್ನು ಪ್ರಾರಂಭಿಸಿ 7 ವರ್ಷಗಳಾಗಿದ್ದರೂ ಅನುದಾನ ಪಡೆಯದಿದ್ದ ಕಾಲೇಜುಗಳೆಷ್ಟು?*

ಆ) *ಕಳೆದ 5 ವರ್ಷಗಳಲ್ಲಿ ಅನುದಾನಕ್ಕೆ ಒಳಪಟ್ಟ ಕಾಲೇಜುಗಳೆಷ್ಟು?*

ಇ) *ಅನುದಾನ ಪಡೆಯದಿದ್ದ ಕಾಲೇಜುಗಳ ನೌಕರರ ಸಂಬಳದ ಸಮಸ್ಯೆಗಳ ಬಗ್ಗೆ ಸರಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಡಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಟಿ.ಸಿ.ಹೆಚ್. 55

ಬಿ.ಇಡಿ. 36

ಆ) ಟಿ.ಸಿ.ಹೆಚ್. ಇಲ್ಲ

ಬಿ.ಇಡಿ. 07

ಇ) ಸದರಿ ಸಂಸ್ಥೆಗಳಿಗೆ ಅನುದಾನ ರಹಿತವಾಗಿ ಮಾನ್ಯತೆ ನೀಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ದೈಹಿಕ ಶಿಕ್ಷಕರನ್ನು ನೇಮಿಸುವುದರ ಬಗ್ಗೆ

915 - ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಇರುವ ದೈಹಿಕ ಶಿಕ್ಷಕರ ಸಂಖ್ಯೆ ಎಷ್ಟು?*

ಆ) *ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಒಟ್ಟು ದೈಹಿಕ ಶಿಕ್ಷಕರ ಸಂಖ್ಯೆ ಎಷ್ಟು?*

ಇ) *ಈ ಖಾಲಿ ಸ್ಥಾನಗಳನ್ನು ಯಾವಾಗ ತುಂಬಲಾಗುವುದು? ಭರ್ತಿ ಮಾಡಲು ಅನುಸರಿಸುತ್ತಿರುವ ನಿಯಮಗಳೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 3995

ಆ) 369

ಇ) ಪ್ರಸ್ತುತ ಖಾಲಿ ಇರುವ ಹುದ್ದೆಗಳನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕ್ರಮ ಕೈಗೊಳ್ಳಲಾಗುವುದು.

ಪದವಿ ಮಹಾ ವಿದ್ಯಾಲಯಗಳ ಅನುದಾನ ಮಂಜೂರಾತಿ ಕುರಿತು

119 - ಶ್ರೀ ಮಂಜುನಾಥ್ ಸಿ.ಕುನ್ನೂರ್(ಶಿಗ್ಗಾಂವ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಜಿಲ್ಲಾ ಶಿಗ್ಗಾಂವ್ ಜಗದ್ಗುರು ರೇಣುಕಾಚಾರ್ಯ ಪದವಿ ಮಹಾ ವಿದ್ಯಾಲಯದ ಸಿಬ್ಬಂದಿಗೆ ವೇತನ ಅನುದಾನ ಎಂದು ಮಂಜೂರಾಗಿದೆ ಹಾಗೂ ಅದನ್ನು ಎಂದಿನಿಂದ ಕೊಡಲಾಗುವುದು.*

ಆ) ರಾಜ್ಯದಲ್ಲಿ 94-95ನೇ ಸಾಲಿನಲ್ಲಿ ಎಷ್ಟು ಕಾಲೇಜುಗಳಿಗೆ ಅನುದಾನ ಮಂಜೂರು ಮಾಡಲಾಗಿದೆ.

ಇ) ಅವುಗಳ ಅನುದಾನ ಬಿಡುಗಡೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಆದೇಶ ಸಂಖ್ಯೆ ಇಡ್ಡಿ 389 ಯುಪಿಸಿ 93, ದಿನಾಂಕ 18-10-94ರಲ್ಲಿ ಧಾರವಾಡ ಜಿಲ್ಲಾ ಶಿಗ್ಗಾಂವ ಜಗದ್ಗುರು ರೇಣುಕಾಚಾರ್ಯ ಪದವಿ ಕಾಲೇಜನ್ನು ದಿನಾಂಕ 01-01-95ರಿಂದ ಜಾರಿಗೆ ಬರುವಂತೆ ಕೆಲವು ಷರತ್ತಿಗೊಳಪಟ್ಟು ವೇತನ ಅನುದಾನ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಆ) ಅಕ್ಟೋಬರ್ 1994ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು 11 ಪ್ರಥಮ ದರ್ಜೆ ಕಾಲೇಜುಗಳನ್ನು ವೇತನ ಅನುದಾನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಇ) ವೇತನನುದಾನದ ವ್ಯಾಪ್ತಿಗೆ ಒಳಪಡಿಸಿರುವ ಪ್ರಕರಣಗಳು ಪುನರ್ ಪರಿಶೀಲನೆಯ್ಲಲಿದೆ.

ಬಿಜಾಪುರ ಜಿಲ್ಲೆಯ ಸಂಪೂರ್ಣ ಸಾಕ್ಷರತಾ ಆಂದೋಲನದ ಬಗ್ಗೆ

875 - ಶ್ರೀ ಬಿ.ಡಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಪೂರ್ಣ ಸಾಕ್ಷರತಾ ಆಂದೋಲನ ಯಶಸ್ವಯಾಗಿದೆಯೇ?

ಆ) ಬಿಜಾಪುರ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಖರ್ಚಾಗುವ ಹಣವೆಷ್ಟು?

ಇ) ಈ ಯೋಜನೆಯಿಂದ ನಿಜವಾಗಿ ಅನಕ್ಷರಸ್ಥರಿಗೆ ಸಹಾಯವಾಗಿದೆಯೇ?

ಈ) ಹಾಗಿದ್ದಲ್ಲಿ ಈ ಯೋಜನೆಯನ್ನು ಮುಂದುವರೆಸುವುದಕ್ಕೆ ಸರ್ಕಾರ ಕೈಕೊಂಡ ಕ್ರಮಗಳೇನು ?

ಶ್ರೀ. ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಭಾಗಶ: ಯಶಸ್ವಿಯಾಗಿದೆ

ಆ) ಸಾಕ್ಷರತಾ ಆಂದೋಲನ ಒಂದು ಜನಾಂದೋಲನ ಜಿಲ್ಲೆಯಲ್ಲಿರುವ ಎಲ್ಲಾ ಅನಕ್ಷರಸ್ಥರನ್ನು ಗುರುತಿಸಿ ಅವರಿಗೆ ಮೂಲ ಶಿಕ್ಷಣವನ್ನು ಸ್ವಯಂ ಸೇವಕರ ಸ್ವಯಂ ಸೇವಾ ನೆಲೆಯಲ್ಲಿ ನೀಡುವಂತಹ ಕಾರ್ಯಕ್ರಮ. ಎಲ್ಲಾ ಅನಕ್ಷರಸ್ಥರಿಗೆ ಕಲಿಕಾ ವಸ್ತುಗಳು ಸ್ವಯಂ ಸೇವಕರಿಗೆ ಕೈಪಿಡಿ ಹಾಗೂ ವಾತಾವರಣ ನಿರ್ಮಾಣಕ್ಕಾಗಿ ಕಲಾಜಾತಾ ಪ್ರೇರಣೆ ಮೇಲ್ವಿಚಾರಣೆ ಇಂತಹವುಗಳಿಗೆ ಜಿಲ್ಲಾ ಮಟ್ಟದಲ್ಲಿಯೇ ಖರ್ಚು ಮಾಡಲಾಗುವುದು. ಆದ್ದರಿಂದ ಅನಕ್ಷರಸ್ಥರ ಸಂಖ್ಯೆಗನುಗುಣವಾಗಿ ತಾಲ್ಲೂಕಿನಿಂದ ತಾಲ್ಲೂಕಿಗೆ ಖರ್ಚು ವೆಚ್ಚಗಳು ಬದಲಾಗುತ್ತವೆ. ಜಿಲ್ಲೆಗೆ ಒಟ್ಟು ರೂ. 300.4 ಲಕ್ಷ ಹಣ ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗಿದ್ದು ಇವರಲ್ಲಿ ತಾಲ್ಲೂಕುಗಳಿಗೆ ತಾಲ್ಲೂಕಿನ ಅನಕ್ಷರಸ್ಥರ ಸಂಖ್ಯೆಗೆ ಅನುಸಾರವಾಗಿ ಖರ್ಚು ಮಾಡಲಾಗುತ್ತದೆ.

ಇ) ಆಗಿದೆ.

ಈ) ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾಕ್ಷರತಾ ಮಿಷನ್ ಮಾರ್ಗದರ್ಶನದಂತೆ ಸಾಕ್ಷರತಾ ಆಂದೋಲನ ಮೂಲ ಶಿಕ್ಷಣ ಒಂದು ವರ್ಷ ಕಾಲಮಿತಿ ಕಾರ್ಯಕ್ರಮ ಇದರ ನಂತರ ಕಲಿತಿರುವುದನ್ನು ಉಳಿಸಿ ಬಳಸಿಕೊಳ್ಳಲು 2 ವರ್ಷದ ಸಾಕ್ಷರೋತ್ತರ